**ಕರ್ನಾಟಕ ಸರ್ಕಾರ**
**(ಕೃಷಿ ಇಲಾಖೆ)**

**ಸಂಖ್ಯೆ**: ಉಕೃನಿ/ಸಾಕೃಘ/ಸಾ.ಸಿರಿ/ಸುತ್ತೋಲೆ-2/2021-22

ಕೃಷಿ ಆಯುಕ್ತಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು
ದಿನಾಂಕ:18.03.2022

**ಸಾವಯವ ಸಿರಿ ಸುತ್ತೋಲೆ-2**

**ವಿಷಯ:** **2021-22ನೇ ಸಾಲಿನ ಘೋಷಣಾ ಕಾರ್ಯಕ್ರಮವಾದ "ಸಾವಯವ ಸಿರಿ" ಯೋಜನೆಯ ಅನುಷ್ಠಾನಕ್ಕೆ ಜಿಲ್ಲಾ ಮಟ್ಟದ ನೊಂದಾಯಿತ ಸಾಮಾಜಿಕ ಸಂಸ್ಥೆಗಳ ಆಯ್ಕೆ.**

**ಉಲ್ಲೇಖ:1.** ದಿನಾಂಕ:17.03.2022ರಂದು ನಡೆದ ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿ ಸಭೆಯ ತೀರ್ಮಾನ.

**2.** ಸಾವಯವ ಸಿರಿ ಸುತ್ತೋಲೆ-1 ದಿನಾಂಕ: 09.02.2022.

**3.** ಸರ್ಕಾರಿ ಆದೇಶ ಸಂಖ್ಯೆ:AGRI-ACT/95/2021, ಬೆಂಗಳೂರು ದಿನಾಂಕ: 08.02.2022

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2021-22ನೇ ಸಾಲಿನ ಆಯವ್ಯಯ ಘೋಷಣಾ ಕಾರ್ಯಕ್ರಮವಾದ "ಸಾವಯವ ಸಿರಿ" ಯೋಜನೆಯ ಅನುಷ್ಠಾನಕ್ಕಾಗಿ ಹೊರಡಿಸಲಾಗಿರುವ ಉಲ್ಲೇಖ-3ರ ಸರ್ಕಾರದ ಆದೇಶದನ್ವಯ ರಾಜ್ಯಾದ್ಯಂತ ಯೋಜನೆಯ ಅನುಷ್ಠಾನಕ್ಕಾಗಿ ಉಲ್ಲೇಖ-2ರ ಸುತ್ತೋಲೆ-1ನ್ನು ಜಿಲ್ಲೆಗಳಿಗೆ ಈಗಾಗಲೇ ನೀಡಲಾಗಿದೆ.

ಈ ಸುತ್ತೋಲೆಯೊಂದಿಗೆ ಯೋಜನಾ ಅನುಷ್ಠಾನದ ವೇಳಾ ಪಟ್ಟಿಯನ್ನು ನೀಡಲಾಗಿದ್ದು, ಅದರನ್ವಯ ಮೊದಲಿಗೆ ಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದಲ್ಲಿ ನೊಂದಾಯಿತ ಸಾಮಾಜಿಕ ಸಂಸ್ಥೆಗಳನ್ನು ಆಯ್ಕೆ ಮಾಡಬೇಕಾಗಿದ್ದು, ಈ ಸಂಬಂಧ ಉಲ್ಲೇಖ-1ರನ್ವಯ ಜಿಲ್ಲೆಗಳಲ್ಲಿ ಸಾಮಾಜಿಕ ಸಂಸ್ಥೆಗಳನ್ನು ಆಹ್ವಾನಿಸಿ, ನೀಡಲಾಗಿರುವ ಅರ್ಜಿ ತಪಾಸಣೆ ಮಾನದಂಡಗಳನ್ವಯ ಪರಿಶೀಲಿಸಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯ ಚಾಲನಾ ಸಮಿತಿಯ ಶಿಫಾರಸ್ಸಿನೊಂದಿಗೆ ಕೇಂದ್ರ ಕಛೇರಿಗೆ ಅರ್ಹ ಸಂಸ್ಥೆಗಳ ಪಟ್ಟಿಯನ್ನು ಕಳುಹಿಸಿಕೊಡಲಾಗಿದೆ. ದಿನಾಂಕ: 17.03.2022 ರಂದು ನಡೆದ ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ಜಿಲ್ಲಾವಾರು ಸಾಮಾಜಿಕ ಸಂಸ್ಥೆಗಳ ಆಯ್ಕೆಗೆ ಅನುಮೋದನೆ ಪಡೆಯಲಾಗಿದೆ (ಜಿಲ್ಲಾವಾರು ಪಟ್ಟಿ **ಅನುಬಂಧ-1** ರಲ್ಲಿ ನೀಡಲಾಗಿದೆ). ಅನುಮೋದನೆಯನ್ವಯ ಜಿಲ್ಲೆಗಳಿಗೆ ಆಯ್ಕೆಯಾದ ಸಾಮಾಜಿಕ ಸಂಸ್ಥೆಗಳೊಂದಿಗೆ ಮಾಡಿಕೊಳ್ಳಬೇಕಾದ ಒಡಂಬಡಿಕೆ ಮತ್ತು ಸಂಸ್ಥೆಗಳು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಸುತ್ತೋಲೆ-1ರಲ್ಲಿ ಈಗಾಗಲೇ ನೀಡಲಾಗಿದೆ.

ಜಿಲ್ಲೆಗಳಲ್ಲಿ ಅನುಮೋದನೆಯಾದ ಸಾಮಾಜಿಕ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡ ನಂತರ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಆ ವ್ಯಾಪ್ತಿಯ ಉಪ ಕೃಷಿ ನಿರ್ದೇಶಕರು ಹಾಗೂ ಸಾಮಾಜಿಕ ಸಂಸ್ಥೆಯು ನಿಯೋಜಿಸುವ ಪ್ರತಿನಿಧಿ ಹೆಸರಿನಲ್ಲಿ ಜಂಟಿ ಖಾತೆಯನ್ನು ತೆರೆದು ಯೋಜನೆಯಡಿ ಸಾಮಾರ್ಥ್ಯಾಭಿವೃದ್ಧಿ ಚಟುವಟಿಕೆಗಳಿಗಾಗಿ ಬಿಡುಗಡೆ ಮಾಡಲಾಗುವ ಅನುದಾನವನ್ನು ಈ ಜಂಟಿ ಖಾತೆಗೆ ವರ್ಗಾಯಿಸುವುದು. ಹಾಗೂ ಮುಂದೆ ಕ್ಷೇತ್ರಮಟ್ಟದಲ್ಲಿ ಯೋಜನೆಯಡಿ ಆಯ್ಕೆಯಾಗುವ ರೈತರಿಗೆ ಮಾರ್ಗಸೂಚಿಯಲ್ಲಿರುವಂತೆ ತರಬೇತಿ ಇನ್ನಿತರೆ ಸಾಮಾರ್ಥ್ಯಾಭಿವೃದ್ಧಿ ಚಟುವಟಿಕೆಗಳನ್ನು ಆಯೋಜಿಸಿರುವುದು.

2021-22ನೇ ಸಾಲಿನಲ್ಲಿ "ಸಾವಯವ ಸಿರಿ" ಯೋಜನೆಯ ಅನುಷ್ಠಾನಕ್ಕಾಗಿ ಒದಗಿಸಲಾದ ಅನುದಾನದಲ್ಲಿ ಸರ್ಕಾರವು ಮಿತಿಗೊಳಿಸಿರುವ ಹಿನ್ನೆಲೆಯಲ್ಲಿ ಇದೀಗ ಜಿಲ್ಲೆಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದ್ದು, ಸದರಿ ಅನುದಾನವನ್ನು ಜಿಲ್ಲೆಗಳಲ್ಲಿ ಆಯ್ಕೆಯಾಗಿರುವ ಸಾಮಾಜಿಕ ಸಂಸ್ಥೆಗಳ ಜೊತೆಗೆ ಒಪ್ಪಂದಕ್ಕೆ ಸಹಿಯಾದ ನಂತರ ಖಜಾನೆಯಿಂದ ನಗಧೀಕರಿಸಿ ಆ ವ್ಯಾಪ್ತಿಯ ಉಪ ಕೃಷಿ ನಿರ್ದೇಶಕರು ಆಯ್ಕೆಯಾದ ಸಾಮಾಜಿಕ ಸಂಸ್ಥೆಯು ನಿಯೋಜಿಸುವ ಪ್ರತಿನಿಧಿಯ ಜೊತೆ ಜಂಟಿ ಖಾತೆಯನ್ನು ತೆರೆದು ಈ ಖಾತೆಗೆ ಅನುದಾನವನ್ನು ವರ್ಗಾಯಿಸಿ ಸಾಮಾಜಿಕ ಸಂಸ್ಥೆಯ ಮುಖಾಂತರ ಕ್ಷೇತ್ರ ಮಟ್ಟದ ಸಾವಯವ ಕೃಷಿಕರಿಗೆ/ರೈತರಿಗೆ ಆಯೋಜಿಸಬೇಕಾಗಿರುವ ಸಾಮಾರ್ಥ್ಯಾಭಿವೃದ್ಧಿ ಚಟುವಟಿಕೆಗಳನ್ನು ಜಂಟಿಯಾಗಿ ನಿರ್ವಹಿಸುವುದು.

**2021-22ನೇ ಸಾಲಿನ ಘೋಷಣಾ ಕಾರ್ಯಕ್ರಮವಾದ "ಸಾವಯವ ಸಿರಿ" ಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾದ/ಮಾಡಲಾಗುವ ಅನುದಾನವನ್ನು ಯಾವುದೇ ಕಾರಣಕ್ಕೂ ವ್ಯಪಗತವಾಗದಂತೆ ಸರ್ಕಾರದ ಆದೇಶದಲ್ಲಿ ಸೂಚಿಸಿರುವ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸುವುದು.**

ಕೃಷಿ ನಿರ್ದೇಶಕರು

**ಪ್ರತಿಯನ್ನು:**

1. ಅಧ್ಯಕ್ಷರು, ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿರವರ ಮಾಹಿತಿಗಾಗಿ ಕಳುಹಿಸಿದೆ.
2. ಮಾನ್ಯ ಕೃಷಿ ಸಚಿವರ ಆಪ್ತ ವಿಭಾಗಕ್ಕೆ ಮಾಹಿತಿಗಾಗಿ ಕಳುಹಿಸಿದೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತಶಾಖೆಗೆ ಮಾಹಿತಿಗಾಗಿ ಕಳುಹಿಸಿದೆ.

## ಅನುಬಂಧ-1

| ಕ್ರಮ ಸಂಖ್ಯೆ | ಜಿಲ್ಲೆ | ಆಯ್ಕೆಯಾದ ಸಾಮಾಜಿಕ ಸಂಸ್ಥೆಗಳ ಹೆಸರು |
|---|---|---|
| 1 | ಬೆಂಗಳೂರು ನಗರ / ಗ್ರಾಮಾಂತರ | ಶ್ರೀ ಶ್ರೀ ಇನ್ಸ್ಟಿಟ್ಯೂಟ್ ಆಫ್ ಅಗ್ರಿಕಲ್ಚರ್ ಸೈನ್ಸಸ್ ಅಂಡ್ ಟೆಕ್ನಾಲಜಿ ಟ್ರಸ್ಟ್, ಬೆಂಗಳೂರು |
| 2 | ವಿಜಯಪುರ | ಶ್ರೀ ಸಿದ್ದೇಶ್ವರ ಸಂಸ್ಥೆ, ವಿಜಯಪುರ |
| 3 | ಬೀದರ್ | ವಿಶ್ವ ಶಾಂತಿ ಟ್ರಸ್ಟ್, ತಡೋಳಾ, ಬಸವಕಲ್ಯಾಣ, ಬೀದರ |
| 4 | ಬೆಳಗಾವಿ | ವೃಂದಾರಣ್ಯ ಗ್ರಾಮ ಪುನಃರೋಥ್ಥಾನ ಮಂಡಳಿ ಹರೇಕೃಷ್ಣಾಶ್ರಮ, ಸಾ: ಕಮಕೇರಿ |
| | | ಶ್ರೀಮನ್ ನಿರಂಜನ್ ಜಗದ್ಗುರು ದುರದುಂಡೇಶ್ವರ ಮಠ ಗೋಶಾಲೆ ಹರಗಾಪೂರ ತಾ\|\| ಹುಕ್ಕೇರಿ |
| 5 | ಚಿಕ್ಕಬಳ್ಳಾಪುರ | ಶ್ರೀ ಸತ್ಯಸಾಯಿ ಲೋಕ ಸೇವಾ ಟ್ರಸ್ಟ್, ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ |
| 6 | ಚಾಮರಾಜನಗರ | ಶ್ರೀ ಮಲ್ಲೆ ಮಹದೇಶ್ವರ ಸ್ವಾಮಿ ಕೃಪಾ ಎಜುಕೇಷನ್ ಸೊಸೈಟಿ (ರಿ), ಮಲ್ಲೆ ಮಹದೇಶ್ವರ ಬೆಟ್ಟ, ಹನೂರು ತಾಲ್ಲೂಕು ಚಾಮರಾಜನಗರ ಜಿಲ್ಲೆ |
| 7 | ಧಾರವಾಡ | ಶ್ರೀ ಮೃತ್ಯಂಜೇಶ್ವರ ದೇವಸ್ಥಾನ ಜೀರ್ಣೋದ್ಧಾರ ಸಮಿತಿ ಟ್ರಸ್ಟ್ ಮಣಕವಾಡ |
| 8 | ದಾವಣಗೆರೆ | ತರಳಬಾಳು ರೂರಲ್ ಡೆವಲಪ್ ಮೆಂಟ್ ಫೌಂಡೇಷನ್, ಸಿರಿಗೆರೆ |
| 9 | ದಕ್ಷಿಣಕನ್ನಡ | ಶ್ರೀ ರಾಮ ವಿದ್ಯಾಕೇಂದ್ರ ಟ್ರಸ್ಟ್, ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲ್ಲೂಕು |
| 10 | ಕಲಬುರ್ಗಿ | ಗುರುಪಾದಲಿಂಗೇಶ್ವರ ವಿರಕ್ತಮಠ ರಿಲೀಜಿಯಸ್ ಮತ್ತು ಚಾರಿಟಬಲ್ ಟ್ರಸ್ಟ್, ಬಬಲಾದ, ಕಲಬುರ್ಗಿ |
| 11 | ಗದಗ | ಶ್ರೀ. ಸಿದ್ದೇಶ್ವರ  ವಿದ್ಯಾ ಪೀಠ (ರಿ), ನರಗುಂದ ಜಿಲ್ಲೆ ಗದಗ |
| 12 | ಕೊಡಗು | ಶ್ರೀ. ತಪೋವನಾ ಕ್ಷೇತ್ರಾಭಿವೃದ್ಧಿ ಸೇವಾ ಮಂಡಳಿ (ರಿ), ಮನೆಹಳ್ಳಿ ಮಠ, ಅಂಕನಳ್ಳಿ ಗ್ರಾಮ, ಶನಿವಾರಸಂತೆ ಹೋಬಳಿ,  ಸೋಮವಾರಪೇಟೆ ತಾ |
| 13 | ಕೋಲಾರ | ಪ್ರಶಾಂತಿ ಬಾಲಮಂದಿರ ಟ್ರಸ್ಟ್, ಗೊಲ್ಲಗುರುವೇನಹಳ್ಳಿ, ಕ್ಯಾಸಂಬಳ್ಳಿ ಹೋಬಳಿ, ಕೆ.ಜಿ.ಎಫ್ ತಾಲ್ಲೂಕು, ಕೋಲಾರ ಜಿಲ್ಲೆ |
| 14 | ಹಾವೇರಿ | ಶ್ರೀ ಶೇಷಾಚಲ ಸದ್ಗುರು ಶಿಕ್ಷಣ ಸಂಸ್ಥೆ, ಆನಂದವನ |
| 15 | ಹಾಸನ | ಶ್ರೀ. ತಣ್ಣೀರು ಹಳ್ಳದ ಮಠ. ಬಿ.ಎಂ. ರಸ್ತೆ, ಹಾಸನ |
| 16 | ಮಂಡ್ಯ | ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ. ಶ್ರೀ. ಆದಿಚುಂಚನಗಿರಿ ಕ್ಷೇತ್ರ, ಚುಂಚನಹಳ್ಳಿ ಪೋಸ್ಟ್ ಬೆಳ್ಳೂರು ಹೋಬಳಿ, ನಾಗಮಂಗಲ ತಾ. ಮಂಡ್ಯ ಜಿ |
| 17 | ರಾಯಚೂರು | ಸಜ್ಜಲಶ್ರೀ ಸಮಗ್ರ ಕೃಷಿ ಅಧ್ಯಯನ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಲಿಂಗಸೂಗೂರು |
| | | ಶ್ರೀ ಗುರು ಒಳಬಳ್ಳಾರಿ ಚನ್ನಬಸವ ಆಧ್ಯಾತ್ಮಿಕ, ಶೈಕ್ಷಣಿಕ, ಗ್ರಾಮೀಣ ಡೆವಲಪ್ಮೆಂಟ್ ಪ್ರತಿಷ್ಠಾನ, ಸಿಂಧನೂರು |
| 18 | ಶಿವಮೊಗ್ಗ | ಧರ್ಮ ಚಕ್ರ ಟ್ರಸ್ಟ್ ಸಂ.2 ಎ. ಶ್ರೀರಾಮಾಶ್ರಮ, ಜೆ.ಪಿ. ರಸ್ತೆ, ಬೆಂಗಳೂರು |
| 19 | ತುಮಕೂರು | ಸುಕ್ಷೇತ್ರ ಎಜುಕೇಷನಲ್ ಅಂಡ್ ಚಾರಿಟೇಬಲ್ ಟ್ರಸ್ಟ್ ಗೋಶಾಲೆ, ಕೆರೆಗೋಡಿ ರಂಗಾಪುರ ಸುಕ್ಷೇತ್ರ ತಿಪಟೂರು ತಾಲ್ಲೂಕು |
| 20 | ಉಡುಪಿ | ಗೋವರ್ಧನ ಗಿರಿ ಟ್ರಸ್ಟ್ (ರಿ) ಕೇರ್ ಆಫ್ ಶ್ರೀ. ಪೇಜಾವರ ಮಠ, ಉಡುಪಿ |

**ಕೃಷಿ ನಿರ್ದೇಶಕರು**

## ಅನುಬಂಧ-2

| ಕ್ರ.ಸಂ | ಜಿಲ್ಲೆ | ಬಿಡುಗಡೆಯಾಗಿರುವ ಅನುದಾನ |
|---|---|---|
| 1 | ಬೆಂಗಳೂರು | 10.00 |
| 2 | ವಿಜಯಪುರ | 10.00 |
| 3 | ಬೀದರ್ | 10.00 |
| 4 | ಬೆಳಗಾವಿ | 20.00 |
| 5 | ಚಿಕ್ಕಬಳ್ಳಾಪುರ | 10.00 |
| 6 | ಚಾಮರಾಜನಗರ | 10.00 |
| 7 | ಧಾರವಾಡ | 10.00 |
| 8 | ದಾವಣಗೆರೆ | 10.00 |
| 9 | ದಕ್ಷಿಣ ಕನ್ನಡ | 10.00 |
| 10 | ಕಲಬುರ್ಗಿ | 10.00 |
| 11 | ಗದಗ | 10.00 |
| 12 | ಕೊಡಗು | 10.00 |
| 13 | ಕೋಲಾರ | 10.00 |
| 14 | ಹಾವೇರಿ | 10.00 |
| 15 | ಹಾಸನ | 10.00 |
| 16 | ಮಂಡ್ಯ | 10.00 |
| 17 | ರಾಯಚೂರು | 20.00 |
| 18 | ಶಿವಮೊಗ್ಗ | 10.00 |
| 19 | ತುಮಕೂರು | 10.00 |
| 20 | ಉಡುಪಿ | 10.00 |
| **ಒಟ್ಟು** | | **220.00** |

ಕೃಷಿ ನಿರ್ದೇಶಕರು

D:\24-01-19 back1\Hema\SAVAYAVA SIRI\CIRCULARS\SavayavaSiri_Circular2.doc